
SERVICE ABOVE SELF



Rotary
विश्वमित्रः
# ವಿಶ್ವಮಿತ್ರ
# VISHWAMITHRA
Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25
Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –43 ದಿನಾಂಕ : 23–04–2025


## ಚಾರ್ಟರ್–ಡೇ – ಸಂಸ್ಥಾಪಕರ ದಿನಾಚರಣೆ

ನಮ್ಮ ಕ್ಲಬ್‌ನ ಚಾರ್ಟರ್ ಡೇ – ಸಂಸ್ಥಾಪಕರ ದಿನಾಚರಣೆಯನ್ನು ದಿನಾಂಕ: 23.04.2025 ರಂದು ಸಂಜೆ 7.00 ಕ್ಕೆ ರೋಟರಿ ಯುವ ಕೇಂದ್ರದಲ್ಲಿ ಆಚರಿಸಲಾಯಿತು. ಅಂದಿನ ಸಭೆಯಲ್ಲಿ ನಮ್ಮ ಹಾಲಿ ಸದಸ್ಯರಾಗಿರುವ ಹಾಗೂ ರೋಟರಿಯಲ್ಲೇ ಹಲವಾರು ಉನ್ನತ ಸ್ಥಾನ ಪಡೆದಿರುವ ರೋಟರಿ ಮಾಜಿ ಅಧ್ಯಕ್ಷರುಗಳು ಹಾಗೂ ಹಾಲಿ ರೋಟರಿಯನ್ನರಲ್ಲದ ಮಾಜಿ ಅಧ್ಯಕ್ಷರುಗಳೂ ಭಾಗವಹಿಸಿದ್ದು, ಅಂದು ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ರೋಟರಿ ಜಿಲ್ಲೆ 3182 ವಲಯ 10 ರ ಮಾಜಿ ಸಹಾಯಕ ಗವರ್ನರ್ ಹಾಗೂ ಹಾಲಿ ರೋಟರಿ ಸೆಂಟಿನರಿಟ್ರಸ್ಟ್‌ನ ಅಧ್ಯಕ್ಷರಾಗಿರುವ ರೊ.ಎನ್.ಎಸ್. ಶ್ರೀಧರ್‌ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದು ಅವರೊಂದಿಗೆ ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಿ, ಯಶಸ್ವಿಗೊಳಿಸಿಕೊಟ್ಟರು.













ಆರಂಭದಲ್ಲಿ ಕಾಶ್ಮೀರ ಕಣಿವೆಗೆ ಪ್ರವಾಸ ಹೋಗಿದ್ದ ನಮ್ಮ 27 ಭಾರತೀಯರು ಅದರಲ್ಲೂ ಕರ್ನಾಟಕದ ಬೆಂಗಳೂರಿನವರಾದ ಶ್ರೀ ಭರತ್ ಭೂಷಣ್ ಮತ್ತು ಶಿವಮೊಗ್ಗೆಯ ಶ್ರೀ ಮಂಜುನಾಥರಾವ್‌ರವರು ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದು ಮೃತರುಗಳ ಆತ್ಮಕ್ಕೆ ಗೌರವ ಸೂಚಕವಾಗಿ ಒಂದು ನಿಮಿಷದ ಮೌನವಾಚರಿಸಿ ಅವರ ಅಗಲಿಕೆ ದು:ಖ ಹಾಗೂ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಗಳಿಗೆ ನೀಡಲಿ ಎಂದು ಪ್ರಾರ್ಥಿಸಲಾಯಿತು.

ಸಭೆಯು ರೊ.ವೈ.ವಿ. ವೆಂಕಟರಮಣ ಜೋಯ್ಸ್‌ರವರ ಕುವೆಂಪು ವಿರಚಿತ–"ತೇನ ವಿನಾ, ತೇನ ವಿನಾ ತೃಣಮಪಿ ನಚಲತಿತೇನ ವಿನಾ" ಎಂಬ ಪ್ರಾರ್ಥನಾಗೀತೆಯೊಂದಿಗೆ ಆರಂಭವಾಯಿತು. ಮಾಜಿ ಅಧ್ಯಕ್ಷರಾದ ರೊ.ವೀರಣ್ಣ ಎ. ಹುಗ್ಗಿಯವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆ ನೀಡಿದರು.

ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಮಾತನಾಡಿ ಶಿವಮೊಗ್ಗೆಯ ಎಲ್ಲಾ ರೋಟರಿ ಕ್ಲಬ್‌ಗಳ ಜಂಟಿ ಕಾರ್ಯಕ್ರಮ ಬಯೋ ಡೈವರ್ಸಿಟಿ ಫಾರೆಸ್ಟ್ ಪ್ರಾಜೆಕ್ಟ್ "ಜೈವಿಕ ಅರಣ್ಯ ಯೋಜನೆ" ಎಲ್ಲರ ಸಹಕಾರದಿಂದ ಮುಂದುವರೆದಿದ್ದು, ಇದರ ನಿರ್ವಹಣೆಗಾಗಿ ಟ್ರಸ್ಟ್ ಒಂದನ್ನು ರಚನೆ ಮಾಡುತ್ತಿದ್ದು, ಶಿವಮೊಗ್ಗೆಯ ಎಲ್ಲಾ ರೋಟರಿ ಸದಸ್ಯರು ರೂ.2000.00 ನೀಡಿ ಟ್ರಸ್ಟಿಗಳಾಗಬೇಕೆಂದು ಕೋರಿದರು. ಈ ಯೋಜನೆಗೆ ಸುಮಾರು ರೂ.7500000.00 ರೂಗಳು ಗ್ಲೋಬಲ್ ಗ್ರಾಂಟ್ ಮೂಲಕ ಒದಗಲಿದ್ದು, ಇದನ್ನು ಉತ್ತಮ ಜೈವಿಕ ಅರಣ್ಯವನ್ನಾಗಿ ಕಾರ್ಯಗತ

## ಈ ವಾರ–ಹಿಂದೂಡಿದ ಸಭೆ

**ಬದಲಾದ ದಿನಾಂಕ, ಸಮಯ ಮತ್ತು ಸ್ಥಳವನ್ನು ಗಮನಿಸಿ**

**ದಿನಾಂಕ: 29–04–2025, ಮಂಗಳವಾರ ಬೆಳಿಗ್ಗೆ: 8.30**

Venue: **Biodiverstiy Forest - Gadikoppa**

Chief Guest: Rtn. **M.P. Anand Murthy**
Past Asst. Governor

Topic: **Save Forest, Save the Climate**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಗೊಳಿಸಬೇಕಾಗಿದೆ ಅದುದರಿಂದ ತಾವೆಲ್ಲರೂ ಟ್ರಸ್ಟಿಗಳಾಗಿ ಎಂದರು. ಟ್ರಸ್ಟಿಗಳಾಗಲು ಅವರು ರೋಟರಿ ಸದಸ್ಯರಾಗಿರಬೇಕು ಅಥವಾ ರೋಟರಾಕ್ಟ್ ಸದಸ್ಯರಾಗಿರಬೇಕು ಎಂದರು.

**ನಮ್ಮ ರೋಟರಿಗೆ ನೂತನ ಸದಸ್ಯರ ಸೇರ್ಪಡೆ :** ನಮ್ಮ ರೋಟರಿಗೆ ಈ ಕೆಳಕಂಡವರನ್ನು ರೋಟರಿ ಸದಸ್ಯರನ್ನಾಗಿ ಈ ವಿಶೇಷ ಸಮಾರಂಭದಲ್ಲಿ ಸೇರ್ಪಡೆಗೊಳಿಸಲಾಯಿತು. ರೊ. ಪಿಡಿಜಿಡಾ.ಪಿ.ನಾರಾಯಣರವರು ನೂತನ ಸದಸ್ಯರಾಗುವವರಿಗೆ ರೋಟರಿ ಸಾಹಿತ್ಯ ಹಾಗೂ ರೋಟರಿ ಪಿನ್‌ಗಳನ್ನು ನೀಡಿ ರೋಟರಿಗೆ ಸೇರ್ಪಡೆಗೊಳಿಸಿದರು. ರೊ. ಎನ್.ವಿ.ಭಟ್, ರೊ.ಮಲ್ಲಿಕಾ ವಿ. ಜೋಯ್ಸ್‌ರವರು ನೂತನ ಸದಸ್ಯರ ಸೇರ್ಪಡೆ ಕಾರ್ಯದಲ್ಲಿ ಸಹಕರಿಸಿದರು. ಅಧ್ಯಕ್ಷ ಮತ್ತು ಕಾರ್ಯದರ್ಶಿ ಮತ್ತು ಮುಖ್ಯಅತಿಥಿ ರೊ.ಎನ್.ಎಸ್. ಶ್ರೀಧರ್‌ರವರು ಜೊತೆಗೂಡಿ ನೂತನ ಸದಸ್ಯರುಗಳನ್ನು ರೋಟರಿಗೆ ಸ್ವಾಗತಿಸಿದರು.




❖ ರೊ. ಆನಂದಕುಮಾರ್
❖ ರೊ. ರುದ್ರೇಗೌಡರು
❖ ರೊ. ಗೀತಾಂಜಲಿ ಪ್ರಸನ್ನಕುಮಾರ್
❖ ರೊ. ಪ್ರೇಮಾ ಹೆಗಡೆ



ಇದೇ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಸದಸ್ಯರಾದ ಖ್ಯಾತ ಎಕ್ಸಿಕ್ಯುಟಿವ್ ಇಂಜಿನಿಯರ್‌ರಾದ, ರಾಜ್ಯಪ್ರಶಸ್ತಿ ವಿಜೇತರು, ಸಿಗಂಧೂರು ಸೇತುವೆ, ತುಂಗಾ ಸೇತುವೆಯನ್ನು ನಿರ್ಮಿಸಿ ಉತ್ತಮವಾದ ಹೆಸರನ್ನು ಪಡೆದಿರುವ ರೊ. ಪೀರ್ ಪಾಶರವರನ್ನು ಅಭಿನಂದಿಸಿ ಗೌರವ ಅರ್ಪಣೆ ಮಾಡಲಾಯಿತು.

ಚಾರ್ಟರ್‌ಡೇ ಪ್ರಯುಕ್ತ ಏರ್ಪಡಿಸಿದ್ದ ಈ ಕೆಳಕಂಡ ಆಟಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು.




**ಕಾಯಿನ್ ಗೇಮ್**

– ರೊ.ಅನುರಾಧ ಶೀರನಾಳಿ ಪ್ರಥಮ ಬಹುಮಾನ
– ರೊ. ಶ್ರೀನಿವಾಸ್ ವಿ ದ್ವಿತೀಯ ಬಹುಮಾನ
– ರೊ. ವಿಶ್ವೇಂದ್ರ ಬಿ.ಎನ್.ತೃತೀಯ ಬಹುಮಾನ

**ಮ್ಯಾಚ್ ಬಾಕ್ಸ್‌ಸ್ಟಿಕ್ ಗೇಮ್**

– ರೊ. ಟಿ.ಕೆ.ಎಂ. ಭಟ್ ಪ್ರಥಮ ಬಹುಮಾನ
– ರೊ. ವಿ. ಶ್ರೀನಿವಾಸ್ – ದ್ವಿತೀಯ ಬಹುಮಾನ
– ರೊ. ಶಾರದಾಗೋಪಾಲ್ ತೃತೀಯ ಬಹುಮಾನ

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ರೊ.ಎನ್.ಜಿ. ಉಷಾ ದಂಪತಿಗಳು ಮಾತನಾಡಿ, ತಮ್ಮ ಹಲವಾರು ಪ್ರಾಜೆಕ್ಟ್‌ಗಳಿಗೆ ಧನ ಸಹಾಯವನ್ನು ಒದಗಿಸಿದವರನ್ನು ಗುರುತಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.




ರೊ. ವೈ.ವಿ.ವೆಂಕಟರಮಣ ಜೋಯ್ಸ್, ರೊ.ಮಲ್ಲಿಕಾ ವಿ.ಜೋಯ್ಸ್ ರೊ. ಎಸ್.ಜಿ. ಗೋಪಾಲ್, ರೊ.ರಮಾಗೋಪಾಲ್, ರೊ.ಡಿಎಸ್. ನಟರಾಜ್ ರೊ.ಭೂಪಾಳಂ ಸತ್ಯನಾರಾಯಣ, ರೊ. ಎ,ಮಂಜುನಾಥ್, ರೊ. ಎಸ್. ಮಂಜುನಾಥ್, ರೊ.ಕಿಶೋರ್ ಶೀರನಾಳಿ ರೊ.ಡಾ.ಮೈಥಿಲಿ ಮುಂತಾದವರುಗಳು ನೆನಪಿನ ಕಾಣಿಕೆ ಪಡೆದರು. ರೊ. ಡಿ.ಎಲ್. ಮಂಜುನಾಥ್, ರೊ.ಟಿ.ಆರ್.ಅಶ್ವಥ ನಾರಾಯಣ್ ಮತ್ತು ರೊ.ಸೆಂಥಿಲ್‌ವೇಲನ್‌ರವರು ಶರಣ್ಯ ಉಲ್ಬಣಿಸಿದ ರೋಗಿಗಳ ಆರೈಕೆ ಕೇಂದ್ರದ ಪರವಾಗಿ ವೇದಿಕೆಗೆ ಆಗಮಿಸಿದರು. ಅವರುಗಳ ಜೊತೆಯಲ್ಲಿದ್ದ ಸಂಸ್ಥೆಯ ಕಾರ್ಯದರ್ಶಿ ರೊ.ಡಿ.ಎಲ್. ಮಂಜುನಾಥರವರು ಮಾತನಾಡಿ, ಗ್ಲೋಬಲ್ ಗ್ರಾಂಟ್ ಮೂಲಕ ಶರಣ್ಯ ಸಂಸ್ಥೆಗೆ ಇನ್ನಷ್ಟು ನೆರವು ಕೊಡಿಸಬೇಕೆಂದು ಪತ್ರ ನೀಡುವುದರ ಮುಖೇನ ಮನವಿ ಮಾಡಿದರು.




**ಮಾಜಿ ಅಧ್ಯಕ್ಷರುಗಳನ್ನು ಗುರುತಿಸುವಿಕೆ ಮತ್ತು ಅಭಿನಂದನೆ :**

ನಮ್ಮ ಕ್ಲಬ್‌ನ ಹಿರಿಯ ಹಾಗೂ ಅನುಭವೀ ಸದಸ್ಯರಾದ ರೊ. ಪಿಡಿಜಿ. ಡಾ.ಪಿ.ನಾರಾಯಣರವರು ನಮ್ಮಕ್ಲಬ್‌ನ ಹುಟ್ಟು ಬೆಳವಣಿಗೆ ಬಗ್ಗೆ ಮಾತನಾಡುತ್ತಾ ನಮ್ಮ ರೋಟರಿ ಕ್ಲಬ್ ಶಿವಮೊಗ್ಗ ಮೈಸೂರು ಮಹಾರಾಜರಿಂದ ರಾಜಠೀವಿಯಿಂದ ರಾಜ ವೈಭವದಿಂದ ಉದ್ಘಾಟಿಸಲ್ಪಟ್ಟದ್ದು ಅಂದಿನ ಮೆರವಣಿಗೆಯಿಂದ ಪ್ರಾರಂಭವಾಗಿ ಇಂದಿನ ದಿನದವರೆಗೂ ಈ ಕ್ಲಬ್ ನಡೆದುಕೊಂಡು ಬಂದು ಸಾರ್ವಜನಿಕರ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದು ಮುಂತಾದುವುಗಳನ್ನು ಎಳೆ ಎಳೆಯಾಗಿ ಕಣ್ಣಿಗೆಕಟ್ಟುವಂತೆ ವಿವರಿಸಿದರು. ರೋಟರಿಯ ವಿಶೇಷವೆಂದರೆ ಪ್ರತೀವರ್ಷವೂ ರೋಟರಿಯಲ್ಲಿ ಪದಾಧಿಕಾರಿಗಳು ಬದಲಾಗುತ್ತಾರೆ. ಆ ಪರಂಪರೆಯೇ ಇಂದಿನವರೆವಿಗೂ ನಡೆದು ಬಂದಿದೆ. ಆದ್ದರಿಂದಲೇ ರೋಟರಿಯು ಯಶಸ್ವಿಯಾಗಿ ಮುನ್ನಡೆಯುತ್ತಾ ಸಾಗಿದೆ ಎಂದರು.

ನಮ್ಮ ಕ್ಲಬ್‌ನ ಎಲ್ಲಾ ಅಧ್ಯಕ್ಷರುಗಳು ತಮ್ಮ ಕಾಲಮಿತಿಯಲ್ಲಿ ಹಲವಾರು ಕೆಲಸವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಹಾಲಿ ಸೂರ್ಯ ನಾರಾಯಣ ಉಡುಪರು 67ನೇ ಅಧ್ಯಕ್ಷರು. ನಮ್ಮ ಕ್ಲಬ್‌ಗೆ ಹೊಸ ಕಟ್ಟಡ ಬಂದಿದೆ.ಮಾಜಿ ಅಧ್ಯಕ್ಷರುಗಳಲ್ಲಿ 31 ಜನ ಸ್ವರ್ಗದಲ್ಲಿದ್ದಾರೆ ಎಂದು ತಿಳಿಸಿ, ಅಂದು ಸಭೆಗೆ ಆಗಮಿಸಿದ್ದ ಮಾಜಿ ಅಧ್ಯಕ್ಷರುಗಳನ್ನು ವೇದಿಕೆಗೆ ಆಹ್ವಾನಿಸುವುದೊಂದಿಗೆ ಅವರ ವರ್ಷದಲ್ಲಿ ಆಗಿರುವ ಪ್ರಮುಖ ಕಾರ್ಯಗಳ ಬಗ್ಗೆ ವಿವರ ನೀಡಿದರು. ಈ ಕೆಳಕಂಡಂತೆ ಮಾಜಿ ಅಧ್ಯಕ್ಷರುಗಳು ವೇದಿಕೆಗೆ ಆಗಮಿಸಿ ಗೌರವ ಸ್ವೀಕರಿಸಿದರು.










**ರೊ. ಟಿ.ಆರ್. ಅಶ್ವಥನಾರಾಯಣ, ರೊ.ಡಿ.ಎಸ್. ನಟರಾಜ್**
**ರೊ. ಹೆಚ್.ಆರ್. ಉಮೇಶ್ ಆರಾಧ್ಯ, ರೊ.ಅಜಿತ್‌ಕುಮಾರ್‌ಇಡ್ಯ**
**ರೊ. ಎ. ಮಂಜುನಾಥ್, ರೊ. ಡಿ.ಎಲ್. ಮಂಜುನಾಥ್**
**ರೊ. ಎನ್.ಎಸ್. ಶ್ರೀಧರ್, ರೊ. ಸುನೀತಾ ಶ್ರೀಧರ್**
**ರೊ. ವೀರಣ್ಣ ಎ. ಹುಗ್ಗಿ, ರೊ. ಕಿಶೋರ್ ಶೀರನಾಳಿ**
**ರೊ. ಎಸ್. ದತ್ತಾತ್ರಿ, ರೊ. ನಾಗಪತಿ ವಿ. ಭಟ್**
**ರೊ. ಸೆಂಥಿಲ್ ವೇಲನ್, ರೊ. ಪಿಡಿಜಿ. ಡಾ.ಪಿ.ನಾರಾಯಣ**

**ರೊ. ಕೆ. ಸೂರ್ಯನಾರಾಯಣ ಉಡುಪರು** (ಹಾಲಿ ಅಧ್ಯಕ್ಷರು) ಇವರೊಂದಿಗೆ ರೊ.ಎನ್.ಜಿ. ಉಷಾ, ಶ್ರೀಮತಿ ಶ್ರೀರಂಜಿನಿ ದತ್ತಾತ್ರಿ, ಶ್ರೀಮತಿ. ಮಂಜುಳಾ ಶ್ರೀಮತಿ ಮಂಜುಳಾ ಆರಾಧ್ಯ ಶ್ರೀಮತಿ. ಶ್ರೀಲತಾ ಶ್ರೀಮತಿ ಅನುರಾಧಾ ಶೀರ್ನಾಳಿ ಮುಂತಾದವರಿದ್ದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿದ್ದ ಮಾಜಿ ಅಧ್ಯಕ್ಷ ರೊ. ಎಸ್. ದತ್ತಾತ್ರಿಯವರು ಲಾಂಗ್ ಲಿವ್ ರೊ.ಡಾ. ನಾರಾಯಣ್ ಘೋಷಣೆಯನ್ನು ಕೂಗಿದರು.

ಮುಖ್ಯ ಅತಿಥಿಗಳಾಗಿದ್ದ ರೊ.ಎನ್.ಎಸ್. ಶ್ರೀಧರ್‌ರವರು ಮಾತನಾಡಿ, ಅಧ್ಯಕ್ಷರಾಗುವುದಕ್ಕೆ 2 ವರ್ಷಗಳ ಮುಂಚೆಯೇ ಪ್ಲಾನ್ ಮಾಡಿ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ಬಹಳಷ್ಟು ಯಶಸ್ಸು ನಮ್ಮದಾಗುತ್ತದೆ ಎಂದರು. ಅಧ್ಯಕ್ಷರಾದವರು ಪ್ಲಾನ್ ಮಾಡಿಯೇ ಮುಂದುವರೆಯಬೇಕು. ಯೋಜನೆ ಮಾಡಿರುವುದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದಲ್ಲಿ ಉನ್ನತ ಸ್ಥಾನಕ್ಕೆ ರೋಟರಿಯನ್ನು ಕೊಂಡೊಯ್ಯಬಹುದು ಎಂದರು. ಜೊತೆಗೆ ಎಲ್ಲಾ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸಬೇಕು. ಈ ರೋಟರಿ ಯುವ ಕೇಂದ್ರದ ನಿರ್ಮಾಣಕ್ಕೆ ಎಲ್ಲಾ ರೋಟರಿ ಸದಸ್ಯರು ಸಹಕಾರ ನೀಡುತ್ತಿದ್ದಾರೆ ಎಂದರು.

ರೋಟರಿಯು ವಿವಿಧ ಕ್ಷೇತ್ರಗಳಲ್ಲಿ ಉದ್ದಿಮೆಗಳಲ್ಲಿ ತೊಡಗಿ ಕೊಂಡಿರುವವರಿಂದ ಕೂಡಿದ ಸಂಸ್ಥೆಯಾಗಿದ್ದು, ಎಲ್ಲರ ಸ್ನೇಹ, ವಿಶ್ವಾಸ ಸೇವೆಯೆ ಇಲ್ಲಿ ಮುಖ್ಯವಾಗಿರುತ್ತದೆ. ಸ್ನೇಹ ಸೇವೆಯು ಸಂಸ್ಥೆಯ ಮುಖ್ಯಗುರಿಯಾಗಿದ್ದು ಸಂಸ್ಥೆ ಚೆನ್ನಾಗಿ ನಡೆದುಕೊಂಡು ಬಂದಿದೆ. ಎಲ್ಲರೂ ಇಲ್ಲಿ ಕಲೆತು ಸಮಯ ಕಳೆಯುವುದರಿಂದ ಅದು ನಮಗೆ ಸಂತೋಷಕೊಡುತ್ತದೆ ಎಂದರು. ಒಬ್ಬರಿಂದಲೇ ಏನೂ ಮಾಡಲಾಗದು ಎಲ್ಲರ ಸಹಕಾರ ಮುಖ್ಯ ಎಂದರು.

**ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು:** ಈ ಕೆಳಕಂಡ ನಮ್ಮ ಸದಸ್ಯರುಗಳು ಈ ತಿಂಗಳಿನಲ್ಲಿ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು ಅವರುಗಳನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು.



- ❖ ರೊ.ವೆಂಕಟರಮಣಜೋಯ್ಸ್ ಮತ್ತು ರೊ. ಮಲ್ಲಿಕಾ ವಿ. ಜೋಯ್ಸ್
- ❖ ರೊ. ಗೀತಾಂಜಲಿ ಮತ್ತು ಶ್ರೀ ಕೆ.ಬಿ. ಪ್ರಸನ್ನ ಕುಮಾರ್
- ❖ ರೊ. ನೀತು ದೀಪಕ್ ಮತ್ತು ಶ್ರೀ ದೀಪಕ್
- ❖ ರೊ. ಕೆ. ಮಂಜುನಾಥ್







ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವಂದನಾರ್ಪಣೆ ಮಾಡಿದರು. ಅಲ್ಲದೇ ಅಂದು ಭೋಜನದ ವ್ಯವಸ್ಥೆ ಮಾಡಿದ ರೊ. ವೈ.ವಿ.ವೆಂಕಟರಮಣ ಜೋಯ್ಸ್ ಮತ್ತು ರೊ.ಶ್ರೀಮತಿ ಮಲ್ಲಿಕಾ ವಿ.ಜೋಯ್ಸ್‌ರವರಿಗೆ ಕೃತಜ್ಞತೆ ಸಲ್ಲಿಸಿದರು. ರಾಷ್ಟ್ರಗೀತೆಯ ಹಾಗೂ ರೊ. ವೈ.ವಿ.ವೆಂಕಟರಮಣ ಜೋಯ್ಸ್‌ರವರ ಭಾರತ್‌ಮಾತಾ ಕೀ ಜೈ ಉದ್ಘೋಷದೊಂದಿಗೆ ಸಭೆ ಮುಕ್ತಾಯವಾಯಿತು. ನಂತರ ಪುಷ್ಕಳ ಭೋಜನವನ್ನು ಸರ್ವರೂ ಸವಿದರು. ❖



## ಸಂಪಾದಕೀಯ

### ಬೇರುಗಳನ್ನು ಮರೆಯದಿರೋಣ

ಖ್ಯಾತ ಫುಟ್‌ಬಾಲ್ ತಾರೆ ಕ್ರಿಶ್ಚಿಯಾನೋ ರೊನಾಲ್ಡೋ ಬಹಳ ಕಷ್ಟದಿಂದ ಎತ್ತರಕ್ಕೇರಿದವರು. ಕುಡಿತದ ದಾಸನಾದ ತಂದೆ, ಮನೆಗೆಲಸ ಮಾಡಿ ಮಕ್ಕಳನ್ನು ಸಾಕುತಿದ್ದ ತಾಯಿ, ಮುರುಕು ಮನೆ, ಅರೆಹೊಟ್ಟೆ, ಬದುಕು ಕಷ್ಟವಿತ್ತು. ಭವಿಷ್ಯ ಅಸ್ಪಷ್ಟವಾಗಿತ್ತು. ಬಹುತೇಕರ ಪ್ರಕಾರ ಈ ಪರಿಸ್ಥಿತಿ ಮೇಲೇಳಲಾಗದ ಪ್ರಪಾತ. ಆದರೆ ರೊನಾಲ್ಡೋ ತಮ್ಮ ಭವಿಷ್ಯದ ಶಿಲ್ಪಿ ತಾವೇ ಆಗುವ ದೃಢ ನಿರ್ಧಾರ ಕೈಗೊಂಡರು. ತಮ್ಮ ಭವಿಷ್ಯ ಇರುವುದು ಫುಟ್‌ಬಾಲ್‌ನಲ್ಲಿಯೇ ಎಂಬುದು ಅವರಿಗೆ ಸ್ಪಷ್ಟವಾಗಿತ್ತು. ಫುಟ್‌ಬಾಲ್ ಅಭ್ಯಾಸ ನಡೆಸಿ ಹಸಿವಾದಾಗ ತಿನ್ನಲು ಹಣವಿಲ್ಲದೇ ಹೊಟೇಲಿನ ಹಿಂಭಾಗಕ್ಕೆ ಹೋಗಿ ಉಳಿದ ಆಹಾರ ಕೊಡುವಂತೆ ರೊನಾಲ್ಡೋ ಕೇಳಿದ್ದೂ ಇದೆ. ಇಂತಹ ರೊನಾಲ್ಡೋ ಈಗ ಜಗತ್ತಿನ ನಂಬರ್ ಒನ್ ಫುಟ್‌ಬಾಲ್ ಆಟಗಾರ. ಈಗ ಬಯಸಿದ್ದೆಲ್ಲ ಪಡೆಯುವ ಅವಕಾಶವಿದೆ.

ಇತ್ತೀಚೆಗೆ ರೊನಾಲ್ಡೋ ಲಿಸ್ಬನ್‌ನಲ್ಲಿ ತಾವು ಬಾಲ್ಯದಲ್ಲಿ ವಾಸಿಸುತ್ತಿದ್ದ ಸ್ಥಳವನ್ನು ತೋರಿಸಲೆಂದು ಮಗನನ್ನು ಕರೆದುಕೊಂಡು ಹೋಗಿದ್ದರು. 'ಅಪ್ಪಾ ನಿಜವಾಗಿಯೂ ನೀನು ಇಲ್ಲಿದ್ದೆಯಾ' ಎಂದು ಅಚ್ಚರಿಯಿಂದ ಕೇಳಿದ ಮಗ. ಅದಕ್ಕೇ ರೊನಾಲ್ಡೋ ಹೇಳುತ್ತಾರೆ; 'ಈಗಿನ ಮಕ್ಕಳು ಎಲ್ಲವೂ ಬಹಳ ಸುಲಭವಾಗಿ ಸಿಗುತ್ತವೆ ಎಂದು ತಿಳಿದಿದ್ದಾರೆ. ಅತ್ಯುತ್ತಮ ಬದುಕು. ಮನೆ, ಕಾರು ಎಲ್ಲವೂ ಆಕಾಶದಿಂದ ಉದುರುತ್ತವೆಂದೂ ಭ್ರಮಿಸುತ್ತಾರೆ. ಇವೆಲ್ಲ ಸುಮ್ಮನೇ ಸಿಗುವುದಿಲ್ಲ. ಕೇವಲ ಪ್ರತಿಭೆಯಿಂದಲೂ ಸಿಗುವುದಿಲ್ಲ. ಎಡೆಬಿಡದೆ ಪ್ರಯತ್ನಿಸುವುದರಿಂದ ಮಾತ್ರವೇ ಸಿಗಲು ಸಾಧ್ಯ. ದೃಢ ನಿರ್ಧಾರ ಮತ್ತು ಪರಿಶ್ರಮದಿಂದ ಏನನ್ನು ಬೇಕಾದರೂ ಸಾಧಿಸಬಹುದೆಂದು ನನ್ನ ಮಕ್ಕಳಿಗೆ ಮಾತ್ರವಲ್ಲ, ನಾನು ಭೇಟಿಯಾಗುವ ಯುವಕರಿಗೆಲ್ಲ ಹೇಳಲಿಚ್ಛಿಸುತ್ತೇನೆ.'


ತಮಗಿಲ್ಲದಿದ್ದರೂ ಮಕ್ಕಳಿಗಾದರೂ ಎಲ್ಲಾ ಸೌಲಭ್ಯ ಸಿಗಲಿ ಎಂದು ಪಾಲಕರು ಮಾಡುವ ಪ್ರಾಮಾಣಿಕ ಪ್ರಯತ್ನಗಳೇ ಇಂದು ಮಕ್ಕಳ ಪಾಲಿಗೆ ಶಾಪವಾಗುತ್ತಿವೆ. ದುಡ್ಡು ಮೊಬೈಲ್‌ನಲ್ಲೋ ಎಟಿಎಮ್‌ನಲ್ಲೋ ಇದೆ ಎಂಬುದವರಿಗೆ ಗೊತ್ತೇ ಹೊರತು ಅದಕ್ಕೆ ತಂದೆತಾಯಿ ಎಷ್ಟು ಕಷ್ಟಪಟ್ಟು ದುಡಿಯಬೇಕು ಎಂಬ ಅರಿವಿರುವುದಿಲ್ಲ. ಪಾಲಕರೂ ಅಷ್ಟೇ, ಒಂದು ಪೆನ್ಸಿಲ್ ಕೇಳಿದರೆ ಒಂದು ಬಾಕ್ಸ್ ಪೆನ್ಸಿಲ್, ಒಂದು ಪೆನ್ ಕೇಳಿದರೆ ನಾಲ್ಕು ಪೆನ್ ಕೊಡಿಸಿ ಹಣದ ಮೌಲ್ಯವನ್ನು ಇಳಿಸಿಬಿಟ್ಟಿದ್ದಾರೆ.

ಹಾಗಾಗಿ ತಮ್ಮ ವಸ್ತುಗಳನ್ನು ಕಾಳಜಿಯಿಂದ ಇಟ್ಟುಕೊಂಡು ಉಪಯೋಗಿಸುವ ಬದಲು ಕಳೆದರೆ ಹೊಸದು ಕೊಂಡರಾಯಿತು ಎನ್ನುವ ಯೋಚನೆ ಈಗಿನ ಮಕ್ಕಳಿಗೆ. ಮಕ್ಕಳು ಆಕಾಶ ಮುಟ್ಟಬೇಕೆನ್ನುವ ಕನಸು ಸಹಜವೇ, ಆದರೆ ಬೇರುಗಳನ್ನು ಮರೆತರೆ ಬದುಕಿಲ್ಲವೆಂಬ ವಾಸ್ತವವನ್ನು ಮುನ್ನುಗ್ಗುವ ಧಾವಂತದಲ್ಲಿ ಹಿಂದಿರುಗಿ ನೋಡುವ ಅಗತ್ಯವನ್ನು ಜತೆಗೆ ಹಣದ ಮೌಲ್ಯವನ್ನು ಹಿರಿಯರೂ ನೆನಪಿಟ್ಟುಕೊಂಡು ಮಕ್ಕಳಿಗೂ ಕಲಿಸಬೇಕಿದೆ.

**ರೊ. ಎಂ. ಮಾಧವಾಚಾರ್**

## ಚಿಂತನ

ಅರಣ್ಯವನ್ನು ನಮ್ಮ ಹಿರಿಯರು ನಮಗಾಗಿ ಬಿಟ್ಟುಕೊಟ್ಟಿದ್ದಾರೆ. ನಾವೂ ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಉಳಿಸೋಣ. ಉಳಿದರೆ ಕಾಡು. ಉಳಿಯುವುದು ನಾಡು. ಪ್ರಕೃತಿ ನಮ್ಮ ಬದುಕಿನ ಭಾಗವಲ್ಲ. ನಾವು ಪ್ರಕೃತಿಯ ಒಂದು ಭಾಗವಷ್ಟೆ.



– ರೊ. ಕೆ. ಸೂರ್ಯನಾರಾಯಣ ಉಡುಪ

## Wedding Anniversary

| | |
|---|---|
| *Mary Joseph & Joyce Mary* | *11th April* |
| *Dr.Girish Kumar & Dr. Shobha M* | *12th April* |
| *Ravi Patil&Sumalatha H.V* | *17th April* |
| *S.Dorai&Kasturi* | *20th April* |
| *Gayathri Sumatheendra& H. Sumatheendra* | *20th April* |
| *Laxminarayana Bhatt & Usha* | *22nd April* |
| *RenukaSrinatha&SrinathaNagaragadde* | *22nd April* |
| *Neethu A.S. & Deepak H.B* | *23rd April* |
| *RaghavendraPawar&Jyothi R* | *28th April* |
| *Dr. Shivakumar H.P.C. &* | *28th April* |
| *Gayathri Praveen & Praveen Kanth* | *29th April* |
| *Manjunath K &Manjula S* | *29th April* |
| *Geethanjali P &Prasannakumar K.P.* | *29th April* |
| *Y.V.VenkataramanaJois&MallikaJois* | *30th April* |
| *S.B. Marigullappanavar&Sharada* | *30th April* |



## ಜನ್ಮ ದಿನದ ಶುಭಾಶಯಗಳು

*Usha N.G*
*30th April*






**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

To,

*Book Post*